# ಅವಧಿ ಮೀರಿದ ಮಾಸ್ಕ್ ವಿತರಣೆ

ನೀಡುವ ಜತೆಗೆ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳುವಂತೆ ಸಭಾನಾಯಕರೂ ಆಗಿರುವ ಸಮಾಜ ಕಲ್ಯಾಣ ಸಚಿವ ಕೋಟಾಶ್ರೀನಿವಾಸಪೂಜಾರಿ ಅವರಿಗೆ ಸೂಚನೆ ನೀಡಿದರು.

ನಿನ್ನೆ ಪ್ರಶ್ನೋತ್ತರ ಕಲಾಪದಲ್ಲಿ ಅವಧಿ ಮೀರಿದ ಮಾಸ್ಕ್ ವಿಧಾನಪರಿಷತ್ ಸದಸ್ಯರಿಗೆ ವಿತರಿಸಿದ ಸಂಬಂಧ ವಿಷಯ ಪ್ರಸ್ತಾಪ ಮಾಡಿದ್ದ ಕಾಂಗ್ರೆಸ್ ಸದಸ್ಯಪಿ.ಆರ್.ರಮೇಶ್, ಇದೊಂದು ಗಂಭೀರವಾದ ವಿಷಯ. ಸೂಕ್ತ ಕ್ರಮ ಕೈಗೊಳ್ಳುವಂತೆ ಸರ್ಕಾರಕ್ಕೆ ಸೂಚನೆ ನೀಡಬೇಕು ಎಂದು ಸಭಾಪತಿಗಳ ಗಮನಕ್ಕೆ ತಂದಿದ್ದರು. ಇಂದು ಈ ವಿಷಯವನ್ನು ಸ್ವಯಂಪ್ರೇರಿತವಾಗಿ ಪ್ರಸ್ತಾಪಿಸಿದ ಸಭಾಪತಿ ಬಸವರಾಜಹೊರಟ್ಟಿ ಅವರು, ಮೆಡಿನ್ ಚೀನಾ ಹೆಸರಿರುವ ಮಾಸ್ಕ್ ಒಂದು ವರ್ಷ ಪೂರ್ಣಗೊಂಡಿದೆ. ಅದರ ಮೇಲೆ 2 ವರ್ಷದ ಅವಧಿಯ ಸ್ಟಿಕರ್ ಹಾಕಿ ನೀಡುವ ಮೂಲಕ ಲೋಪವೆಸಗಿರುವವರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಸೂಚನೆ ನೀಡಿದರು.

ಇದಕ್ಕೆ ಪ್ರತಿಕ್ರಿಯಿಸಿದ ಸಭಾನಾಯಕ ಕೋಟಾಶ್ರೀನಿವಾಸಪೂಜಾರಿ, ಸೂಕ್ತ ತನಿಖೆ ನಡೆಸಿ ವರದಿ ಸಲ್ಲಿಸುವುದಾಗಿ ಹೇಳಿದರು. ನಿನ್ನೆ ರಮೇಶ್ ಅವರ ಪ್ರಸ್ತಾಪಕ್ಕೆ ಆಡಳಿತ ಪಕ್ಷದ ಸದಸ್ಯೆ ತೇಜಸ್ವಿನಿಗೌಡ ದ್ವನಿಗೂಡಿಸಿ ಶಾಸಕರಿಗೆ ನೀಡುವ ಮಾಸ್ಕ್ ಮೆಡಿನ್ ಚೀನಾದಾ ಯಾಕೆ ಕೊಡಬೇಕು. ಮೆಡಿನ್ ಇಂಡಿಯಾ ಮಾಸ್ಕ್ ಕೊಡುವಂತೆ ಒತ್ತಾಯಿಸಿದ್ದರು.

Sanjevani 17.09.2021

# ಶ್ರೀರಾಮುಲುಗೆ ಹೊರಟ್ಟಿ ತರಾಟೆ

ಬೆಂಗಳೂರು, ಸೆ. 17– ಸಾರಿಗೆ ಇಲಾಖೆಗೆ ಸಂಬಂಧಿಸಿದ ಪ್ರಶ್ನೆಗೆ ಉತ್ತರ ನೀಡಬೇಕಾಗಿದ್ದ ಸಚಿವ ಬಿ. ಶ್ರೀರಾಮುಲು ಅವರ ಗೈರು ಹಾಜರಿಗೆ ಸಭಾಪತಿ ಬಸವರಾಜಹೊರಟ್ಟಿ ತರಾಟೆಗೆ ತೆಗೆದುಕೊಂಡ ಘಟನೆ ವಿಧಾನಪರಿಷತ್‌ನಲ್ಲಿಂದು ನಡೆಯಿತು.

ಸಚಿವರು ಏಕಾಏಕಿ ಗೈರು ಹಾಜರಾದರೆ ಹೇಗೆ, ತಮಗೆ ಮಾಹಿತಿ ನೀಡಿ ಅನುಮತಿ ಪಡೆಯಬೇಕಲ್ಲವೆ ಎಂದು ಸಭಾನಾಯಕ ಹಾಗೂ ಸಮಾಜ ಕಲ್ಯಾಣ ಸಚಿವ ಕೋಟಾಶ್ರೀನಿವಾಸಪೂಜಾರಿ ಅವರನ್ನು ಪ್ರಶ್ನಿಸಿದರು.

ಪ್ರಶ್ನೋತ್ತರ ಕಲಾಪದಲ್ಲಿ ಕೆ.ಟಿ. ಶ್ರೀಕಂಠೇಗೌಡ ಅವರ ಪ್ರಶ್ನೆಗೆ ಸಮಾಜ ಕಲ್ಯಾಣ ಸಚಿವರ ಪರವಾಗಿ ಸಭಾನಾಯಕ ಕೋಟಾಶ್ರೀನಿವಾಸಪೂಜಾರಿ ಉತ್ತರ ನೀಡಲು ಮುಂದಾಗುತ್ತಿದ್ದಂತೆ ಮಧ್ಯ ಪ್ರವೇಶಿಸಿದ ಸಭಾಪತಿ ಬಸವರಾಜಹೊರಟ್ಟಿ, ಸಾರಿಗೆ ಸಚಿವರು ಎಲ್ಲಿ, ಯಾಕೆ ಬಂದಿಲ್ಲ ಎಂದು ಪ್ರಶ್ನಿಸಿದರು.

ಆಗ ಸಭಾನಾಯಕ ಕೋಟಾಶ್ರೀನಿವಾಸಪೂಜಾರಿ ಅವರು, ಸಾರಿಗೆ ಸಚಿವ ಶ್ರೀರಾಮುಲು ಅವರು ಗೈರು ಹಾಜರಾಗುವ ಸಂಬಂಧ ತಮ್ಮ ಪೀಠಕ್ಕೆ ಪತ್ರ ಕಳುಹಿಸಿದ್ದಾರೆ. ಹಾಗಾಗಿಯೇ ತಾವು ಉತ್ತರ ನೀಡಲು ಮುಂದಾದೆ ಎಂದರು.

ಮಧ್ಯ ಪ್ರವೇಶಿಸಿದ ಸಭಾಪತಿ ಬಸವರಾಜಹೊರಟ್ಟಿ, ಪತ್ರ ತಮಗೆ ಇನ್ನೂ ತಲುಪಿಲ್ಲ ಎನ್ನುವಷ್ಟರಲ್ಲಿ ಅಧಿಕಾರಿಗಳು ಪತ್ರ ನೀಡಿದರು. ಆಗ ಸಭಾಪತಿಗಳು ಸಚಿವರು ಸದನಕ್ಕೆ ಗೈರು ಹಾಜರಾಗಬೇಕಾದರೆ ತಮ್ಮ ಅನುಮತಿ ಪಡೆಯುವಂತೆ ನೋಡಿಕೊಳ್ಳಿ ಅಲ್ಲದೆ ಮುಂದೆ ಈ ರೀತಿ ಆಗದಂತೆ ಎಚ್ಚರವಹಿಸಿ ಎಂದು ಸಭಾನಾಯಕರಿಗೆ ಸೂಚಿಸಿದರು.

ಪ್ರಶ್ನೆ ಕೇಳಿದ್ದ ಕೆ.ಟಿ. ಶ್ರೀಕಂಠೇಗೌಡ ಅವರು, ರಾಜ್ಯದ 547 ಸಾರಿಗೆ ಸಂಸ್ಥೆ ಬಸ್ ನಿಲ್ದಾಣಗಳ ಪೈಕಿ 262 ಬಸ್ ನಿಲ್ದಾಣಗಳಲ್ಲಿ ಮಹಿಳೆಯರಿಗೆ ವಿಶ್ರಾಂತಿ ಕೊಠಡಿ, ಶೌಚಾಲಯ ಇಲ್ಲ. ಶೌಚಾಲಯ ಇಲ್ಲದಿದ್ದರೆ ರಸ್ತೆಗೆ ಹೋಗಬೇಕು. ಅಗತ್ಯ ಮೂಲಭೂತ ಸೌಲಭ್ಯ ಕಲ್ಪಿಸಿ ಎಂದರೆ ಅನುದಾನದ ಲಭ್ಯತೆಯನ್ನು ನೋಡಿ–ಕೊಂಡು ಹಂತ ಹಂತವಾಗಿ ಮಾಡುತ್ತೇವೆ ಎನ್ನುವ ಉತ್ತರ ನೀಡಿದ್ದಾರೆ. ಶೌಚಾಲಯ ನಿರ್ಮಾಣ ಮಾಡುವುದಕ್ಕೂ ಅನುದಾನ ಲಭ್ಯತೆ ಬೇಕಾ, ಮಹಿಳಾ ಸದಸ್ಯರು ಮಹಿಳೆಯರ ಬೆಂಬಲಕ್ಕೆ ಬರಬೇಕು ಎಂದು ಸದನದಲ್ಲಿ ಹಾಜರಿದ್ದ ಮಹಿಳಾ ಸದಸ್ಯರಿಗೆ ಮನವಿ ಮಾಡಿದರು.

Sanjevani 17.09.2021

# ಅವಧಿ ಮೀರಿದ ಮಾಸ್ಕ್ ವಿತರಣೆ ತಪ್ಪಿತಸ್ಥರ ವಿರುದ್ಧ ಕ್ರಮಕ್ಕೆ ಸೂಚನೆ

(ನಮ್ಮ ಪ್ರತಿನಿಧಿಯಿಂದ)

**ಬೆಂಗಳೂರು, ಸೆ. 17-** ಅವಧಿ ಮೀರಿದ ಮಾಸ್ಕ್ ವಿತರಿಸಿದ ಸಂಬಂಧ ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳುವಂತೆ ಸಭಾಪತಿ ಬಸವರಾಜ ಹೊರಟ್ಟಿ ಸರ್ಕಾರಕ್ಕೆ ವಿಧಾನಪರಿಷತ್‌ನಲ್ಲಿಂದು



ಸೂಚಿಸಿದ್ದಾರೆ.

ಒಂದು ವರ್ಷದ ಅವಧಿ ಮೀರಿದ ಮಾಸ್ಕ್‌ಗೆ 2 ವರ್ಷದ ಸ್ಟಿಕರ್ ಅಂಟಿಸಿ ನೀಡಿರುವ ಸಂಬಂಧ ಆರೋಗ್ಯ ಇಲಾಖೆಯ ಕ್ರಮದ ಬಗ್ಗೆ ಸೂಕ್ತ ತನಿಖೆ ನಡೆಸಿ ವರದಿ ನೀಡುವ

(ಎರಡನೇ ಪುಟ ನೋಡಿ)